MYSORE LEGISLATIVE ASSEMBLY.

FIRST DAY.

Monday, 21st February 1955.

The House met in the Legislative Assembly Hall, Old Public Offices, Bangalore, at Twelve of the Clock.

[MR. SPEAKER (SRI H. S. RUDRAPPA, B.SC., LL.B.) in the Chair.]

MEMBER SWORN.

SRI MALLIKARJUNAPPA GOWDA (Sorab—Shikaripur).

SECRETARY'S REPORT.

Acts assented to by His Highness the Rajpramukh or the President.

SECRETARY.—Sir, I beg to lay on the Table a statement showing the Acts which have received the assent of His Highness the Rajpramukh or the President subsequent to the previous report made during the last session.

QUESTIONS AND ANSWERS.

Roads included in the Five-Year Plan.

Q.—19. SRI S. KARIAPPA (Virupakshapura).—

Will the Government be pleased to state :—

(*a*) the names of roads included in the First Five-Year Plan (details for Kanakapura and Channapatna Taluk may please be furnished) ;

(*b*) the names of roads proposed to be included in the Second Five-Year Plan (details for Kanakapura and Channapatna Taluks may please be furnished) ;

(*c*) the names of roads that have been constructed under the First Five Year Plan (details for Kanakapura and Channapatna may kindly be furnished) ?

A.—SRI K. HANUMANTHAIYA (Chief Minister).—

(*a*) (1) Widening the tank bund in the 16th mile of Bangalore-Mysore Road *via* Kanakapura.

(2) Kanakapura-Kodihalli Road.

(3) Cement-concreting Bangalore-Mysore Road *via* Kanakapura 2/35 to 2/36.

(4) Cement concreting the deviation road near Ramanagaram.

(5) Forming a road from Ramanagaram to join Ramanagaram-Magadi-Huliyurdurga Road.

(*b*) The Second Five-Year Plan is under preparation

(*c*) (1) Cement-concreting Bangalore-Mysore Road *via* Kanakapura.

(2) Cement-concreting the deviation road near Ramanagaram.

ಶ್ರೀ ಎಸ್. ಕರಿಯಪ್ಪ.—ಪಂಚವಾರ್ಷಿಕ ಯೋಜನೆಯಲ್ಲಿ ಇನ್ನೂ ಕೆಲವು ಕಾಂಗಾರಿಗಳನ್ನು ಸೇರಿಸಲಾಗುವುದು ಹೇಳೋಣವಾಯಿತು. ಹಾಗೆ ಯಾವ ಯಾವ ಕಾಂಗಾರಿಗಳನ್ನು ಸೇರಿಸಲಾಗುತ್ತದೆ ?

*ಶ್ರೀ ಕೆ. ಹನುಮಂತಯ್ಯ.—ಅಯಾ ಸ್ಥಳದ ಆವಶ್ಯಕತೆ ಮತ್ತು ಹಣದ ಸೌಲಭ್ಯ ಇವುಗಳನ್ನು ಗಮನದಲ್ಲಿಟ್ಟುಕೊಂಡು ಸೇರಿಸಲಾಗುತ್ತದೆ.

ಶ್ರೀ ಎಸ್. ಕರಿಯಪ್ಪ.—ತಮ್ಮ ಪಟ್ಟಿಯಲ್ಲಿ ಆ ಕೆಲಸಗಳನ್ನು ಸೇರಿಸುವಾಗ ಜನರು ಅರ್ಜಿಗಳ ಮೂಲಕ ತಮ್ಮ ಗಮನಕ್ಕೆ ತಂದಿರುವಂಥ ಕೆಲಸ ಕಾರ್ಯಗಳ ಅಂಶವನ್ನೂ ತಾವು ಗಮನದಲ್ಲಿಟ್ಟುಕೊಂಡು ಪಟ್ಟಿಯಲ್ಲಿ ಅವುಗಳನ್ನೂ ಸೇರಿಸುವಿರಾ ?

ಶ್ರೀ ಕೆ. ಹನುಮಂತಯ್ಯ.—ಹಾಗೂ ಮಾಡಲಾಗುತ್ತದೆ.

---

* Indicates that the remarks or speeches have not been revised by the Member concerned.

ಶ್ರೀ ಎಸ್. ಕರಿಯಪ್ಪ.—ಈಗಾಗಲೇ ಜನವರಿಂದ ಆಯಾ ತಾಲ್ಲೂಕುಗಳಿಂದ ತೀರ್ಮಾನವಾಗಿ ಬಂದಿರತಕ್ಕಂಥ ಮತ್ತು ಸರ್ಕಾರಕ್ಕೆ ಅರ್ಜಿಯ ಮೂಲಕ ಅರಿಕೆ ಮಾಡಿಕೊಂಡಿರತಕ್ಕಂಥ ಎಲ್ಲಾ ಕೆಲಸಗಳನ್ನೂ ಈ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವಿರಾ ?

ಶ್ರೀ ಕೆ. ಹನುಮಂತಯ್ಯ.—ಹಾಗೆ ತೀರ್ಮಾನವಾಗಿ ಬರತಕ್ಕಂಥ ಎಲ್ಲಾ ವಿಷಯಗಳನ್ನೂ ಕೈಗೊಳ್ಳಬೇಕೆಂದರೆ ಬಹಳ ಕಷ್ಟಕ್ಕೆ ಬರುತ್ತದೆ. ಎಷ್ಟೆಷ್ಟು ಸಾಧ್ಯವೋ ಅಷ್ಟನ್ನು ಆಯಾ ಜಿಲ್ಲೆಗಳನ್ನು ನೋಡಿಕೊಂಡು ಆ ಕೆಲಸಗಳನ್ನು ಪಟ್ಟಿಗೆ ಸೇರಿಸಲಾಗುತ್ತದೆ.

ಶ್ರೀ ಎಸ್. ಕರಿಯಪ್ಪ.—ಹಾಗೆ ಎಲ್ಲಾ ಕೆಲಸಗಳನ್ನೂ ಸೇರಿಸಿದ್ದರೂ ಹೋಗಲಿ, ಬಹಳ ಹಿಂದುಳಿದಿರುವ ತಾಲ್ಲೂಕುಗಳಿಂದ ಬಂದಿರತಕ್ಕ ವಿಷಯಗಳಿಗಾದರೂ ತಾವು ಹೆಚ್ಚು ಗಮನ ಕೊಡುವಿರಾ ?

ಶ್ರೀ ಕೆ. ಹನುಮಂತಯ್ಯ.—ಆಲೋಚನೆ ಮಾಡೋಣ.

ಶ್ರೀ ಕೆ. ಜಿ. ತಿಮ್ಮೇಗೌಡ.—ಈ ಪಂಚವಾರ್ಷಿಕ ಯೋಜನೆಯಲ್ಲಿ ಚನ್ನಪಟ್ಟಣ ತಾಲ್ಲೂಕಿನಲ್ಲಿ ಯಾವ ಕೆಲಸಗಳನ್ನು ಸೇರಿಸಿದ್ದೀರಿ ?

*ಶ್ರೀ ಕೆ. ಹನುಮಂತಯ್ಯ.—ಚನ್ನಪಟ್ಟಣ ತಾಲ್ಲೂಕಿನಲ್ಲಿ ಯಾವ ಕೆಲಸಗಳನ್ನೂ ಸೇರಿಸಿರುವಂತೆ ಕಾಣುವುದಿಲ್ಲ.

ಶ್ರೀ ಕೆ. ಜಿ. ತಿಮ್ಮೇಗೌಡ.—ತಾವು ಉತ್ತರದಲ್ಲಿ "ಚನ್ನಪಟ್ಟಣ, ಕಾಕಾನಹಳ್ಳಿ ಮತ್ತು ರಾಮನಗರಂ ಮುಂತಾದ ಕಡೆಗಳಲ್ಲಿ" ಎಂಬುದಾಗಿ ಹೇಳಿದ್ದೀರಲ್ಲಾ !

ಶ್ರೀ ಕೆ. ಹನುಮಂತಯ್ಯ.—ಆ ಕೆಲಸಗಳ ಪೈಕಿ ಕೆಲವು ಆ ಎರಡು ತಾಲ್ಲೂಕುಗಳಿಗೂ ಅನ್ವಯಿಸುವ ಹಾಗೆ ಇರುವುದರಿಂದ ಹಾಗೆ ಉತ್ತರ ಕೊಡಲಾಗಿದೆ.

———

Karnataka Ekikarana.

Q.—116. Sri K. LAKKAPPA (Channarayapatna).—

Will the Government be pleased to state :—

(*a*) whether they have received report from the Fact Finding Committee appointed by them regarding Karnataka Ekikarana ;

(*b*) whether they submitted their opinion in the matter to the States Reorganisation Committee ?

A.—Sri K. HANUMANTHAIYA (Chief Minister).—

(*a*) Yes.

(*b*) No.

ಶ್ರೀ ಕೆ. ಲಕ್ಕಪ್ಪ.—ಆಂಕಿ ಅಂಶಗಳ ಪರಿಶೀಲನಾ ಸಮಿತಿಯ ವರದಿ ತಮ್ಮ ಕೈ ಸೇರಿ ಎಷ್ಟು ದಿವಸಗಳಾದವು ?

Mr. SPEAKER.—That has already been distributed.

Sri K. LAKKAPPA.—I want to know when the Report was submitted to the Government.

Sri K. HANUMANTHAIYA.—I don't remember the date. It was submitted two or three months back.

ಶ್ರೀ ಕೆ. ಲಕ್ಕಪ್ಪ.—ಈ ಆಂಕಿ ಅಂಶಗಳ ಸಮಿತಿಯು ಒಪ್ಪಿಸಿರುವ ವರದಿಯ ಮೇಲೆ ಚರ್ಚೆ ನಡೆಸುವುದಕ್ಕಾಗಿ ತಾವು ಎರಡು ದಿನಗಳ ಕಾಲಾವಕಾಶವನ್ನು ಗೊತ್ತುಮಾಡಿದ್ದೀರಿ, ಆದರೆ ತಾವು ಸದಸ್ಯರಿಂದ ಅವರವರ ಅಭಿಪ್ರಾಯಗಳನ್ನು ಪಡೆಯುತ್ತೀರೋ ಅಥವಾ ಅವರುಗಳಿಂದ ಅಭಿಮತವನ್ನೇ ಪಡೆಯುತ್ತೀರೋ ?

Mr. SPEAKER.—That statement will perhaps be made on the day when the relevant motion is moved. I think we need not waste time on that now.

Sri K. LAKKAPPA.—I want to know whether the motion will be moved or not—whether they will lay on the Table the decision or take the concensus of opinion of the members of the Assembly.

ಶ್ರೀ ಕೆ. ಹನುಮಂತಯ್ಯ.—ಆ ತೀರ್ಮಾನವನ್ನೂ ಸಭೆಯ ಅಭಿಪ್ರಾಯಕ್ಕೇ ಬಿಟ್ಟುಬಿಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಇದರ ಬಗ್ಗೆ ಸರ್ಕಾರದವರು ತಮ್ಮ ಅಭಿಪ್ರಾಯವನ್ನು ಸ್ಟೇಟ್ಸ್ ರೀಆರ್ಗನೈಜೇಷನ್ ಸಮಿತಿಯವರಿಗೆ ಒಪ್ಪಿಸುವ ಮೊದಲು, ಇದರ ಬಗ್ಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಸದಸ್ಯರ ಅಭಿಪ್ರಾಯವನ್ನು ಪಡೆಯಲು ಅವಕಾಶವಿದೆಯೇ ?

Sri K. HANUMANTHAIYA.—That does not arise.

ಶ್ರೀ ಕೆ. ಲಕ್ಕಪ್ಪ.—ಅನೇಕ ವ್ಯಕ್ತಿಗಳೂ ಮತ್ತು ವರ್ತಮಾನ ಪತ್ರಿಕಾ ಕರ್ತರುಗಳೂ, ಮತ್ತು ಪತ್ರಿಕೆಯಲ್ಲಿನ ನುಡಿಗಳೂ ಈ ಸಮಿತಿ ವರದಿಯು ಆಂಕಿ ಅಂಶಗಳೂ ಏಕೀಕರಣಕ್ಕೆ ಅನುಕೂಲವಾಗಿಲ್ಲವೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Mr. SPEAKER.—That can be debated upon when discussion takes place.